ಓಎಸ್ 166/2017

**ಪಿ.ಡಬ್ಲ್ಯೂ: 01.**

ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ಈ ದಾವೆಯನ್ನು ಹೂಡುವ ಮುನ್ನವೇ ನನ್ನ ತಂದೆ ನನಗೆ ಸೇರಿರುವ ಆಸ್ತಿಯನ್ನು ವಿಭಾಗ ಮಾಡಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕೊತ್ತೇಗಾಲ ಗ್ರಾಮಪಂಚಾಯತಿಗೆ ಸೇರಿದ ಜಂಜರ್ ನಂ.61/35 ರ ದಾಖಲಾತಿಯನ್ನು ಸಾಕ್ಷಿ ಒಪ್ಪಿರುತ್ತಾರೆ. ಅದನ್ನು **ನಿಡಿ1** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಪಂಚಾಯತಿಯಿಂದ ಅದು ನನಗೆ ಮಂಜೂರಾಗಿರುವುದು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಕೊತ್ತೇಗಾಲ ಗ್ರಾಮಪಂಚಾಯತಿಗೆ ಸೇರಿದ ಜಂಜರ್ ನಂ.85/45/1 ರ ದಾಖಲಾತಿಯನ್ನು 1 ನೇ ವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಒಪ್ಪಿರುತ್ತಾರೆ. ಅದನ್ನು **ನಿಡಿ2** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಪಂಚಾಯತಿಯಿಂದ 1 ನೇ ವಾದಿಗೆ ಮಂಜೂರಾಗಿರುವುದು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಕೊತ್ತೇಗಾಲ ಗ್ರಾಮಪಂಚಾಯತಿಗೆ ಸೇರಿದ ಜಂಜರ್ ನಂ.90/45/2 ರ ದಾಖಲಾತಿ 4 ನೇ ವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಒಪ್ಪಿರುತ್ತಾರೆ. ಅದನ್ನು **ನಿಡಿ3** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು 1 ನೇ ವಾದಿ ಮಹದೇವರವರಿಂದ ಪಡೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಕೊತ್ತೇಗಾಲ ಗ್ರಾಮಪಂಚಾಯತಿಗೆ ಸೇರಿದ ಜಂಜರ್ ನಂ.176 ಸ್ವತ್ತಿನ ಸಂಖ್ಯೆ 92 ರ ದಾಖಲಾತಿ 2 ನೇ ವಾದಿಯ ಸೊಸೆಯಾದ ಉಮಾವತಿರವರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಒಪ್ಪಿರುತ್ತಾರೆ. ಅದನ್ನು **ನಿಡಿ4** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಕೊತ್ತೇಗಾಲ ಗ್ರಾಮಪಂಚಾಯತಿಗೆ ಸೇರಿದ ಜಂಜರ್ ನಂ.2/1 ಎರ ದಾಖಲಾತಿ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಒಪ್ಪಿರುತ್ತಾರೆ. ಅದನ್ನು **ನಿಡಿ5** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ನನ್ನ ತಂದೆಯ ಹೆಸರಿನಲ್ಲಿದ್ದ ಸ್ವತ್ತು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಕೊತ್ತೇಗಾಲ ಗ್ರಾಮಪಂಚಾಯತಿಗೆ ಸೇರಿದ ಜಂಜರ್ ನಂ.1/1 ರ ನಿಡಿ5 ರ

ದಾಖಲಾತಿ 2ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಒಪ್ಪಿರುತ್ತಾರೆ. ಸಾಕ್ಷಿ ಮುಂದುವರಿದು ನನ್ನ ತಂದೆಯ ಹೆಸರಿನಲ್ಲಿದ್ದ ಸ್ವತ್ತು ಎಂದು ಉತ್ತರಿಸುತ್ತಾರೆ. ನಮ್ಮಗಳ ತಂದೆ ಈಗಾಗಲೇ ವಿಭಾಗ ಮಾಡಿ ಸ್ವತ್ತುಗಳನ್ನು ನೀಡಿರುತ್ತಾರೆ, ಗ್ರಾಮ ಪಂಚಾಯತಿಯಿಂದ ಮಂಜೂರಾಗಿರುವುದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ1 ರಿಂದ 5ರಲ್ಲಿ ಕಂಡುಬರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆಗೆ ಸೇರಿರುವ ಆಸ್ತಿಯನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

ದಿಃ28.11.2000ರಂದು ನನ್ನ ತಂದೆ 1 ಮತ್ತು 2ನೇ ಪ್ರತಿವಾದಿಗೆ 1ನೇ ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ವಿಲ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ತಂದೆಗೆ ಸೇರಿರುವ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ವಿಲ್ ನಲ್ಲಿ 1 ಮತ್ತು 2ನೇ ಪ್ರತಿವಾದಿ ಸಮವಾಗಿ 1ನೇ ದಾವಾಸ್ತಿಯನ್ನು ಹಂಚಿಕೊಳ್ಳಬೇಕು, ಉಳಿದ ಮಕ್ಕಳಿಗೆ ಈಗಾಗಲೇ ಆಸ್ತಿಗಳನ್ನು ನೀಡಿರುತ್ತೇನೆಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗಾಗಲೇ ವಿಲ್ ಬರೆದಿರುವ ಕಾರಣ 1ನೇ ದಾವಾಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ಸುಬ್ರಮಣ್ಯರವರು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಈಗಾಗಲೇ ಭಾಗಾಂಶ ಮಾಡಿ ನಿಮಗೆ ಆಸ್ತಿಗಳನ್ನು ನೀಡಿರುವ ಕಾರಣ ನಿಮಗೆ ಭಾಗಾಂಶ ಕೇಳಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ**ಇಲ್ಲ.

ಓಎಸ್ 166/2017

ಪಿ.ಡಬ್ಲ್ಯೂ: 01.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.